**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು

ಸಿ.ಸಿ.ನಂ.**402/2021**
ದಿನಾಂಕ: **18.01.2025**

ಪಿರ್ಯಾದಿ : ಶ್ರೀ ಬಿ. ಹರೀಶ್
ಬಿನ್ ಬಸವರಾಜಪ್ಪ,
ಸುಮಾರು 37 ವರ್ಷ, ಕೃಷಿಕ,
ವಾಸ: ಬೈರಗೊಂಡನಹಳ್ಳಿ ಗ್ರಾಮ,
ಬಾಣವಾರ ಅಂಚೆ, ಅರಸೀಕೆರೆ ತಾಲ್ಲೂಕು.

ವಿರುದ್ಧ

ಆರೋಪಿ : ಶ್ರೀ ಮತಿ. ಮೀನಾ ಎಸ್.ಬಿ.
ಕೋಂ ಶಶಿಧರ ಕೆ.ಎಸ್.
ವಾಸ: ಕವಾಲಿಪುರ ಗ್ರಾಮ,
ಮತ್ತಿಘಟ್ಟ ಅಂಚೆ, ಕಡೂರು ತಾಲ್ಲೂಕು,
ಅಂಗನವಾಡಿ ಕಾರ್ಯಕರ್ತೆ,
ಸಿದ್ರಾಮ್ಮಹಳ್ಳಿ ಗ್ರಾಮ, ಮತ್ತಿಘಟ್ಟ ಅಂಚೆ,
ಕಡೂರು ತಾಲ್ಲೂಕು.

<u>ದಂಡ ಪ್ರಕ್ರಿಯಾ ಸಂಹಿತೆಯ ಕಲಂ **251** ರ ಅಡಿಯಲ್ಲಿ ಆರೋಪಣಾ ಸಾರಾಂಶ:</u>

ಫಿರ್ಯಾದುದಾರರು ಮತ್ತು ಆರೋಪಿಯಾದ ನೀವು ಪರಿಚಿತರಿದ್ದು, ಆರೋಪಿಯಾದ ನೀವು ನಿಮ್ಮ ವ್ಯವಹಾರದ ಅವಶ್ಯತೆಗೋಸ್ಕರ ಫಿರ್ಯಾದುದಾರರಿಂದ ದಿನಾಂಕ 05.01.2019 ರಂದು ರೂ.8,00,000/- ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ನೀವು ದಿನಾಂಕ 30.01.2020 ರಂದು ಕರೂರು ವೈಶ್ಯಾ ಬ್ಯಾಂಕ್, ಬಿ.ಹೆಚ್.ರೋಡ್, ಎ.ಪಿ.ಎಂ.ಸಿ. ಎದುರು, ಅರಸೀಕೆರೆ ಶಾಖೆಯ ಚೆಕ್ ಸಂಖ್ಯೆ: 000002 ಅನ್ನು ರೂ.8,00,000/- ಗಳಿಗೆ ಕೊಟ್ಟಿದ್ದು, ಅದನ್ನು ಫಿರ್ಯಾದುದಾರರು ಅವರ ಖಾತೆ ಇರುವ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕಡೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣ ಇಲ್ಲ" ಎಂಬ ಕಾರಣಕ್ಕೆ ಸದರಿ ಚೆಕ್ ಅಮಾನ್ಯಗೊಂಡು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿದ್ದು, ಈ ಬಗ್ಗೆ ಫಿರ್ಯಾದುದಾರರು ಅವರ ವಕೀಲರ ಮೂಲಕ ನಿಮಗೆ ದಿನಾಂಕ 15.02.2020 ರಂದು ನೋಟಿಸನ್ನು ಜಾರಿಗೊಳಿಸಿದ್ದು, ಸದರಿ ನೋಟಿಸು ನಿಮಗೆ ದಿನಾಂಕ 17.02.2020

ರಂದು ಜಾರಿಯಾಗಿದ್ದು ನೀವು ಸುಳ್ಳು ಉತ್ತರವನ್ನು ನೀಡಿ ಚೆಕ್ಕಿನ ಹಣವನ್ನು ಮರುಪಾವತಿಸಿರುವುದಿಲ್ಲ, ಆದುದರಿಂದ ನೀವು ನೆಗೋಷಿಯೇಬಲ್ ಇನ್ಸ್ಟ್ರುಮೆಂಟ್ಸ್ ಕಾಯ್ದೆಯ ಕಲಂ **138** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

**1)** ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ**?**

ಉತ್ತರಃ ಹೌದು

**2)** ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪರವಾಗಿ ಪ್ರತಿರಕ್ಷೆ ಇದೆಯೇ**?**

ಉತ್ತರಃ ಪ್ರತಿರಕ್ಷೆ ಸಾಕ್ಷಿ ಇರುತ್ತದೆ**.**

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಸಹಿ/-
(ತಾಹಾಕಲೀಲ್ ಕೆ.ಎ.)
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

ಆರೋಪಿ ಸಹಿಃ